

ಜನರನ್ನು ಹೊತ್ತು
ನಡೆವ ಪೋರ್ಟರುಗಳು



ಹಿಮಾಲಯದ
ಹೊಲಗದ್ದೆಗಳು

ಅವಸ್ಥೆ ನೋಡಲಾರದೆ ನಾವೇ ತುಸು ಹಣ ಕೂಡಿಸಿಕೊಟ್ಟೆವು. ಬಿಸಿರಕ್ತ ಇರುವವರೆಗೆ ದುಡಿವ ಪೋರ್ಟರು–ಗೈಡುಗಳು, ನಡುವಯಸ್ಸು ಮೀರಿದ ಬಳಿಕ ದನಗಾಹಿಗಳಾಗುವರಂತೆ. ವಿಶೇಷವೆಂದರೆ, ಇಲ್ಲಿನ ತರುಣ–ತರುಣಿಯರು ಚಿಕ್ಕವಯಸ್ಸಿನಲ್ಲೇ ಮದುವೆಯಾಗುವರು. ಚಂದ್ರಖಾನಿ ಚಾರಣದಲ್ಲಿ ಹಾದಿತೋರುಗನಾಗಿದ್ದ ಹದಿನೇಳರ ಪ್ರಾಯದ ಸೈದರ್‌ಸಿಂಗನಲ್ಲಿ ಕೇಳಿದೆ:

‘ಯಾಕಪ್ಪಾ, ಇಷ್ಟು ಬೇಗ ಮದುವೆಯಾದೆ?’

‘ನನಗೆ ಇಷ್ಟವಿರಲಿಲ್ಲ. ಮನೆಯವರೇ ಸೇರಿ ಮಾಡಿದರು.’

‘ನಿನಗೆ ಜಮೀನಿಲ್ಲವೊ?’

‘ಇಲ್ಲದೆ ಏನು? ಆದರೆ ಅದರಲ್ಲಿ ಬದುಕು ನಡೆಯುವುದಿಲ್ಲ. ಪರ್ವತಗಳ ಸಂದಿನಲ್ಲಿರುವ ನಮ್ಮ ಹಿಡುವಳಿ ಚಿಕ್ಕವು. ಅದರ ಉತ್ಪನ್ನದಲ್ಲಿ ಎರಡು ಹೊತ್ತು ಉಣ್ಣಬಹುದು. ಮೇಲೆ ಹೋಗಲಾಗದು. ಪಶುಪಾಲನೆಯಲ್ಲೂ ಆದಾಯವಿಲ್ಲ. ಗೈಡ್–ಪೋರ್ಟರ್ ಕೆಲಸವಾದರೆ, ಬಟ್ಟೆಬರೆ ಹಬ್ಬ ಮದುವೆ ಖರ್ಚುಗಳಿಗೆ ರೊಕ್ಕ ಸಿಗುತ್ತದೆ’.

ಹಿಮಾಲಯದ ಪೋರ್ಟರುಗಳಿಗೆ ಸ್ಪರ್ಧೆ ಒಡ್ಡಿರುವವರು ನೇಪಾಳದಿಂದ ವಲಸೆ ಬಂದಿರುವ ಕಾರ್ಮಿಕರು. ಕುಫ್ರಿ ಎಂಬಲ್ಲಿ ನಮಗೆ ಕುದುರೆ ಸವಾರಿ ಮಾಡಿಸಿದ ಬಂಟು 16 ವರ್ಷದವನು. ದಿನವಹಿ 50 ರೂಪಾಯಿಗಾಗಿ ಕುದುರೆಯ ಕಡಿವಾಣ ಹಿಡಿದುಕೊಂಡು ಪ್ರವಾಸಿಗರನ್ನು ಕಣಿವೆಯ ಆಳಕ್ಕೆ ಕರೆದೊಯ್ಯುವವನು. ಮೈಯೆಲ್ಲ ಕಜ್ಜಿ. ನೇಪಾಳದಲ್ಲಿರುವ ತಂದೆ ತಾಯಿಗೆ ತಿಂಗಳಾ 500 ರೂಪಾಯಿ ಕಳಿಸುತ್ತಾನಂತೆ. ತಮ್ಮಂದಿರು ಶಾಲೆಗೆ ಹೋಗುತ್ತಾರಂತೆ. ಥಲಾನಿನಲ್ಲಿ ಸೇಬುತೋಟದ ಕೂಲಿಕಾರ ರಾಣಾ, ಎರಡು ಗಜನಿಂಬೆಯನ್ನು ಕೈಯಲ್ಲಿ ಹಿಡಿದುಕೊಂಡು ದಾರಿಯಲ್ಲಿ ಸಿಕ್ಕಿದ. ಬಂಧುವೊಬ್ಬನನ್ನು ಹುಡುಕಿ ತೋಟದಿಂದ ತೋಟಕ್ಕೆ ಅಲೆಯುತ್ತಿದ್ದ ಈತ, ನೇಪಾಳದಿಂದ ಸೇಬು ಕಟಾವಿಗೆ ಜನರನ್ನು ಕರೆದುಕೊಂಡು ಬರುವ ಸೇರೆಗಾರ. ಇವರಿಗೆಲ್ಲ ಹೋಲಿಸಿದರೆ ಧರ್ಮಶಾಲಾದಲ್ಲಿ ನಮ್ಮನ್ನು ಸುತ್ತಾಡಿಸಿದ ಟ್ಯಾಕ್ಸಿ ಚಾಲಕ ನವೀನ್, ಆಧುನಿಕನಾಗಿದ್ದನು. ಅಭದ್ರತೆಯಿಂದ ಹುಟ್ಟುವ ಕೀಳರಿಮೆ ಪರಿಣಾಮವಿರಬೇಕು, ಮಂದಿಯ ಮೇಲೆ ಬಿದ್ದು ಮಾತಾಡಿಸುತ್ತಿದ್ದನು. ನೇಪಾಳಿ, ಟಿಬೆಟಿಯನ್, ಹಿಂದಿ, ಪಹಾಡಿ, ಇಂಗ್ಲಿಷು ಕಲಿತಿದ್ದ ಅವನಿಗೆ ಗ್ರಾಹಕರನ್ನು ಸೆಳೆವ ಕಲೆಯಿತ್ತು. ತಾಯ್ನಾಡು ನೇಪಾಳದ ಮೇಲೆ ಪ್ರೀತಿ; ಆದರೆ ಅಲ್ಲಿನ ಅಂತರ್ಯುದ್ಧ, ಬಡತನಗಳ ಮೇಲೆ ಬೇಸರ. ಭಾರತದಲ್ಲೇ ಬದುಕಲು ನಿರ್ಧರಿಸಿದ್ದನು.

ಸಿಮ್ಲಾ, ಮನಾಲಿ, ಧರ್ಮಶಾಲಾ, ಕುಲು ಮಂಡಿಗಳಲ್ಲಿ ಕಾಶ್ಮೀರಿ ಕೂಲಿಕಾರರು, ಗೋವಾ ಮಂಗಳೂರಿನಲ್ಲಿ ಉತ್ತರ ಕರ್ನಾಟಕದ ಜನರಂತೆ, ಬಸ್ಸು–ರೈಲು ನಿಲ್ದಾಣಗಳಲ್ಲಿ ಕಾಣಸಿಗುವರು. ಅವರ ಕೈಯಲ್ಲಿ ಒಂದು ನೂಲಹಗ್ಗವಿರುತ್ತದೆ – ಲಗೇಜನ್ನು ಕಟ್ಟಿ ಬೆನ್ನಮೇಲೆ ಏರಿಸಿ ಹಿಡಿದುಕೊಳ್ಳಲು. ಪರ್ವತ ಪ್ರದೇಶಗಳಲ್ಲಿ ಸರಕನ್ನು